# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 29-6-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜಾಗತಿಕ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಇಳಿಕೆ

ಬ್ರೆಜಿಲ್ ಸಹಿತ ಲ್ಯಾಟಿನ್ ಅಮೇರಿಕಾ, ಯು.ಎಸ್ ಮುಂತಾದ ಜಾಗತಿಕ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಇಳಿಕೆಯಾಗಿದೆ. ಜಾಗತಿಕ ಆರ್ಥಿಕ ಹಿಂಜರಿತ, ಬಳಕೆಯಲ್ಲಿ ರಾಜಿ ಮುಂತಾದ ಕಾರಣಗಳಿಂದ ಬಳಕೆಯಾಗುವ ನಿರೀಕ್ಷೆಯಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಖಾದ್ಯತೈಲ ದರಗಳೂ ಇಳಿಕೆಯಾಗಿದೆ. ದೇಶೀ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಇಳಿಕೆಯಾಗಿದೆ. ಚೀನಾದಲ್ಲೂ ಸೋಯಾ ಎಣ್ಣೆ ಉತ್ಪಾದನೆ ಹಾಗೂ ಸೋಯಾ ಮೀಲ್ ಉತ್ಪಾದನೆ ಹೆಚ್ಚಳವಾಗಿದ್ದು ದರ ಇಳಿಕೆಯಾಗಿದೆ.

## ಉದ್ದು, ತೊಗರಿ ದರಗಳು ಹೆಚ್ಚಳ

ಕಡಿಮೆ ದರದಲ್ಲಿದ್ದ ಉದ್ದು, ತೊಗರಿ ದರಗಳು 5 ಶೇಕಡಾ ತನಕ ಹೆಚ್ಚಳ ಕಂಡಿದೆ. ಪ್ರಮುಖ ಬೆಳೆಯುವ ಪ್ರದೇಶಗಳಲ್ಲಿ ಮುಂಗಾರು ವಿಳಂಬದಿಂದ ಬಿತ್ತನೆ ವಿಳಂಬವಾಗುವ ಸಾಧ್ಯತೆಯಿದೆ. ಜೂನ್ 24 ರ ತನಕ ಬೇಳೆಕಾಳು ನಾಟಿ ಹಿಂದಿನ ವರ್ಷಕ್ಕಿಂತ 36 ಶೇಕಡಾ ಇಳಿಕೆಯಲ್ಲಿತ್ತು. ಇದರಲ್ಲಿ ತೊಗರಿ ಬಿತ್ತನೆ 55 ಶೇಕಡಾ ಇಳಿಕೆ ಹಾಗೂ ಉದ್ದು ಬಿತ್ತನೆ 52 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಬಿತ್ತನೆ ವಿಳಂಬದಿಂದ ಕಟಾವು ವಿಳಂಬವಾಗುವ ಸಾಧ್ಯತೆಯಿದ್ದು, ದರ ಹೆಚ್ಚಳ ಸಾಧ್ಯತೆಯಿದೆ. ಆದರೂ ಸಾಕಷ್ಟು ದಾಸ್ತಾನು ಹಾಗೂ ಆಮದು ಬೇಳೆಕಾಳುಗಳ ಲಭ್ಯತೆಯಿಂದ ಹೆಚ್ಚಿನ ದರ ಹೆಚ್ಚಳಕ್ಕೆ ತಡೆಯಾಗುವ ಸಾಧ್ಯತೆಯಿದೆ.